**ಪಿ. ಡಬ್ಲ್ಯೂ.1** **ಓ.ಎಸ್.313/2016**

# ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ಕಾರ್ಯಾಲಯ, ಗುಬ್ಬಿ

**ದಿನಾಂಕಃ- 14.12.2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

| | |
|---|---|
| ಸಾಕ್ಷಿದಾರರ ಹೆಸರು<br>ವರ್ಷ<br>ಕೆಲಸ<br>ವಾಸ್ತವ್ಯ | ಕಾಂತರಾಜು ಬಿನ್ ವೆಂಕಟಪ್ಪ<br>35 ವರ್ಷ<br>ವ್ಯವಸಾಯ<br>ಕಡಬ |
| | ಸತ್ಯ ಪ್ರತಿಜ್ಞೆಯ ಮೇರೆಗೆ |

## ಮುಂದುವರಿದ ಪಾಟೀ ಸವಾಲುಃ- ಪ್ರತಿವಾದಿ ಪರ ವಕೀಲರಾದ ಶ್ರೀ.ಸಿ.ಆರ್,ಬಿ. ರವರಿಂದ

6. ದಿಃ27-06-2005 ರಲ್ಲಿ ನನ್ನ ತಂದೆ ಹಾಗೂ ಆತನ ಸಹೋದರರು ( ದೊಡ್ಡಪ್ಪ ಮತ್ತು ಚಿಕ್ಕಪ್ಪನ ಮಕ್ಕಳು) ಅವರ ಒಟ್ಟು ಕುಟುಂಬ ಹಾಗೂ ಪಿತಾರ್ಜಿತ ಆಸ್ತಿಗಳನ್ನು ವಿಭಾಗ ಮಾಡಿಕೊಂಡರು ಎಂದರೆ ನನಗೆ ಗೊತ್ತಿಲ್ಲ. ಸದರಿ ವಿಭಾಗವಾದಾಗ ನನ್ನ ತಂದೆ ಇದ್ದರು ನನಗೆ ಗೊತ್ತಿಲ್ಲ. ಸದರಿ ವಿಭಾಗವನ್ನು ನಮ್ಮ ತಂದೆ ಹಾಗೂ ಅವರ ಸಹೋದರು ಪಂಚಾಯಿತಿದಾರರ ಸಮಕ್ಷಮ ಮಾಡಿಕೊಂಡರು ಎಂದರೆ ನನಗೆ ಗೊತ್ತಿಲ್ಲ. ಆ ವಿಭಾಗಪತ್ರದಲ್ಲಿ ತಿಮ್ಮಕ್ಕ ಉರುಫ್ ಸಣ್ಣಮ್ಮ ನಿಗೆ ಆಸ್ತಿಗಳನ್ನೂ ಕೂಡ ಅವರು ವಿಭಾಗ ಮಾಡಿಕೊಂಡರು ಎಂದರೆ ಸರಿಯಲ್ಲ. ಸದರಿ ತಿಮ್ಮಕ್ಕನ ಹೆಸರಿನಲ್ಲಿ ಕಡಬ ಗ್ರಾಮದಲ್ಲಿ ಒಂದು ನಿವೇಶನ ಹಾಗೂ ಕಡಬ ಅಮಾನನಿಕೆರೆಯಲ್ಲಿ ತರೀ ಜಮೀನು 1 ಎಕರೆ 18 ಗುಂಟೆ ಇತ್ತು ಎಂದರೆ ಸರಿ. ಸದರಿ ಕಡಬ ಅಮಾನಿಕೆರೆಯ ತರೀ ಜಮೀನು 1 ಎಕರೆ 18 ಗುಂಟೆ ಜಮೀನನ್ನು ನನ್ನ ತಂದೆ ಹಾಗೂ ಆತನ ಸಹೋದರರು ವಿಭಾಗ ಮಾಡಿಕೊಂಡರು ಎಂದರೆ ಸರಿಯಲ್ಲ.

7. ಆ ವಿಭಾಗದಂತೆ ದಾಸಪ್ಪನ ಮಗ ಹನುಮಂತಯ್ಯನಿಗೆ ಸದರಿ ಜಮೀನಿನಲ್ಲಿ 9 ವರೆ ಗುಂಟೆ ಜಮೀನು ಅವರ ಭಾಗಕ್ಕೆ ಬಂದಿತ್ತು ಎಂದರೆ ಸರಿಯಲ್ಲ. ಅದೇ ರೀತಿ ದಾಸಣ್ಣನ ಮಗ ವೆಂಕಟಾಚಲಯ್ಯನಿಗೂ ಸಹ 9 ವರೆ ಗುಂಟೆ ಜಮೀನು ಅವರ ಭಾಗಕ್ಕೆ ಬಂದಿತ್ತು ಎಂದರೆ ಸರಿಯಲ್ಲ. ಅದೇ ರೀತಿ ದಾಸಣ್ಣನ ಮಗ ವೆಂಕಟಪ್ಪ ನಿಗೂ ಸಹ 9 ವರೆ ಗುಂಟೆ ಜಮೀನು ಅವರ ಭಾಗಕ್ಕೆ ಬಂದಿತ್ತು ಎಂದರೆ ಸರಿಯಲ್ಲ. ಅದೇ ರೀತಿ ಚಿಕ್ಕತಿಮ್ಮಯ್ಯನ ಮಕ್ಕಳಾದ ಗೋವಿಂದಯ್ಯ ನಿಗೆ 5 ಮುಕ್ಕಾಲು ಗುಂಟೆ ಹಾಗೂ ಉಳಿದ ಮಕ್ಕಳಾದ ಗೋಪಾಲಯ್ಯ , ಶ್ರೀನಿವಾಸ , ಮೂಡ್ಲಯ್ಯ ಮತ್ತು ಶಂಕರಯ್ಯನಿಗೆ ತಲಾ 4 ಮುಕ್ಕಾಲು ಗುಂಟೆ ಜಮೀನು ಬಂತು ಎಂದರೆ ಸರಿಯಲ್ಲ. ಮೇಲೆ ಹೇಳಿದಂತೆ ನನ್ನ ತಂದೆ ಹಾಗೂ ಆತನ ಸಹೋದರರು ವಿಭಾಗ ಮಾಡಿಕೊಂಡು ಅವರವರ ಭಾಗಕ್ಕೆ ಬಂದ ಜಮೀನುಗಳಲ್ಲಿ ಸ್ವಾಧೀನಾನುಭವದಲ್ಲಿ ಇದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ನಾನು ಸ್ವಾಧೀನದಲ್ಲಿ ಇದ್ದೇನೆ ಎನ್ನುತ್ತಾರೆ. ಸ.ನಂಃ95/2 ಜಮೀನನ್ನು ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿಯಲ್ಲ. ಸದರಿ ಜಮೀನು ಮೇಲೆ ಹೇಳಿದಂತೆ ವಿಭಾಗವಾಗಿರುವುದರಿಂದ ಅವರವರ ಭಾಗಕ್ಕೆ ಬಂದಿದ್ದ ಜಮೀನುಗಳಲ್ಲಿ ಪ್ರತ್ಯೇಕ ಸ್ವಾಧೀನದಲ್ಲಿ ಇರುವುದರಿಂದ ನಾನು ಈ ದಾವೆಗೆ ಸೇರಿಸಿಲ್ಲ ಎಂದರೆ ಸಾಕ್ಷಿಯು ನಾನೇ ಸ್ವಾಧೀನದಲ್ಲಿ ಇರುವುದರಿಂದ ಅದನ್ನು ಈ ದಾವೆಯಲ್ಲಿ ಸೇರಿಸಿಲ್ಲ ಎನ್ನುತ್ತಾರೆ. , ಸ.ನಂಃ95/2 ರ ಜಮೀನಿನ ಖಾತೆ ಪಹಣಿ ನನ್ನ ಹೆಸರಿಗೆ ಮಾಡಿಸಿಕೊಂಡಿಲ್ಲ ಅದು ಸಣ್ಣಮ್ಮನ ಹೆಸರಿನಲ್ಲಿದೆ. ಸದರಿ ಜಮೀನಿನ ಮೇಲೆ ನನಗೆ ಪೂರ್ಣ ಹಕ್ಕು ಇಲ್ಲದೇ ಇರುವುದರಿಂದ ಉದ್ದೇಶಪೂರ್ವಕವಾಗಿಯೇ ನಾನು ಅವರ ಖಾತೆಯನ್ನು ನನ್ನ ಹೆಸರಿಗೆ ಮಾಡಿಸಿಕೊಂಡಿಲ್ಲ ಎಂದರೆ ಸಾಕ್ಷಿಯು ಮುಂದೆ ಮಾಡಿಸಿಕೊಳ್ಳಬೇಕು ಎನ್ನುತ್ತಾರೆ. ಸದರಿ ವಿಭಾಗವಾಗುವಾಗ ದಾವಾಸ್ವತ್ತನ್ನು 12 ಭಾಗ ಮಾಡಲು ಆಗುವುದಿಲ್ಲ , ಯಾರಾದರೂ ಒಬ್ಬರು ಅದನ್ನು ವಿಭಾಗದಲ್ಲಿ ತೆಗೆದುಕೊಳ್ಳಿ ಎಂದು ತೀರ್ಮಾನಮಾಡಲಾಯಿತು ಎಂದರೆ ಸರಿಯಲ್ಲ. ಆಗ ದಿಃ27-06-2005 ರಲ್ಲಿ ವೆಂಕಟಪ್ಪ ಮತ್ತು ಆತನ ಸಹೋದರರು ದಾವಾಸ್ವತ್ತಿಗೆ ರೂ.30,000/- ಬೆಲೆಕಟ್ಟಿದ್ದರು ಎಂದರೆ ಸರಿಯಲ್ಲ.

8. 1 ನೇ ಪ್ರತಿವಾದಿ ದಾವಾಸ್ವತ್ತನ್ನು ರೂ.30,000/- ಕೊಟ್ಟು ಅವರ ಭಾಗಕ್ಕೆ ತೆಗೆದುಕೊಂಡರು ಎಂದರೆ ಸರಿಯಲ್ಲ. ಆ ರೂ.30,000/- ಹಣವನ್ನು ನನ್ನ ತಂದೆ ಹಾಗೂ ಆತನ ಸಹೋದರರು ಹಂಚಿಕೊಂಡರು ಎಂದರೆ ಸರಿಯಲ್ಲ. ನನ್ನ ತಂದೆ ಆತನ ಹೋದರರು ಹಣವನ್ನುಪಡೆದುಕೊಂಡ ಮೇಲೆ ದಾವಾಸ್ವತ್ತನ್ನು 1 ನೇ ಪ್ರತಿವಾದಿಗೆ ಬಿಟ್ಟುಕೊಟ್ಟರು ಎಂದರೆ ಸರಿಯಲ್ಲ. ಆ ರೀತಿ ಬಿಟ್ಟುಕೊಟ್ಟ ಮೇಲೆ 1 ನೇ ಪ್ರತಿವಾದಿ ದಾವಾಸ್ವತ್ತಿನ ಖಾತೆಯನ್ನು ಅವರ ಹೆಸರಿಗೆ ಮಾಡಿಸಿಕೊಂಡರು ಎಂದರೆ ಸರಿಯಲ್ಲ. ದಾವಾಸ್ವತ್ತಿನ ಖಾತೆ 1 ನೇ ಪ್ರತಿವಾದಿ ತನ್ನ ಹೆಸರಿಗೆ ಖಾತೆ ಮಾಡಿಸಿಕೊಂಡು ಅವರೊಬ್ಬರೇ ಸ್ವಾಧೀನಾನುಭವದಲ್ಲಿ ಇದ್ದಾರೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ತನ್ನ ಹೆಸರಿಗೆ ದಾವಾಸ್ವತ್ತಿನ ಖಾತೆ ಮಾಡಿಸಿಕೊಂಡಿರುವುದನ್ನು ಪ್ರಶ್ನಿಸಿ ನಾನು ಮೇಲ್ಮನವಿ ಸಲ್ಲಿಸಿದ್ದೇನೆ. ಆ ರೀತಿ ಮೇಲ್ಮನವಿ ಸಲ್ಲಿಸಿರುವ ಬಗ್ಗೆ ನಾನು ನ್ಯಾಯಾಲಯಕ್ಕೆ ಯಾವುದೇ ದಾಖಲೆ ಸಲ್ಲಿಸಿಲ್ಲ ಎಂದರೆ ಸರಿಯಲ್ಲ.

9. ದಾವಾಸ್ವತ್ತನ್ನು1 ನೇ ಪ್ರತಿವಾದಿ , 2 ನೇಪ್ರತಿವಾದಿಗೆ ರೂ.72,000/- ದಿಃ10-05-2013 ರಂದು ಮಾರಾಟ ಮಾಡಿರುತ್ತಾರೆ ಎಂದರೆ ಸರಿ. 2 ನೇ ಪ್ರತಿವಾದಿಗೆ 1 ನೇ ಪ್ರತಿವಾದಿ ದಾವಾಸ್ವತ್ತಿನ ಸ್ವಾಧೀನವನ್ನು ಕೊಟ್ಟಿದ್ದು ಈಗ ದಾವಾಸ್ವತ್ತಿನ ಖಾತೆ 2 ನೇ ಪ್ರತಿವದಿಾಯ ಹೆಸರಿನಲ್ಲಿದೆ ಎಂದರೆ ಸಾಕ್ಷಿಯ ಅದು ಮೋಸ ಎನ್ನುತ್ತಾರೆ. ನಾನು ಹಾಜರುಪಡಿಸಿರುವ ನಿ.ಪಿ.4 ದಾವಾಸ್ವತ್ತಿನ ಖಾತೆ 2 ನೇ ಪ್ರತಿವಾದಿ ಯ ಹೆಸರಿನಲ್ಲಿದೆ ಎಂದರೆ ಸರಿ. 2 ನೇ ಪ್ರತಿವಾದಿಯು ದಾವಾಸ್ವತ್ತಿನ ಖಾತೆಯನ್ನು ಮಾಡಿಸಿಕೊಂಡಿರುವುದನ್ನು ಪ್ರಶ್ನಿಸಿ ನಾನು ಮೇಲ್ಮನವಿ ಸಲ್ಲಿಸಿದ್ದೇನೆ. ದಾವಾಸ್ವತ್ತನ್ನು 1 ನೇ ಪ್ರತಿವಾದಿ ವಿಭಾಗದಲ್ಲಿ ತೆಗೆದುಕೊಂಡ ಮೇಲೆಕಂದಾಯ ಕಟ್ಟಿಕೊಂಡು ಬರುತ್ತಿದ್ದರು ಎಂದರೆ ಸರಿಯಲ್ಲ. ಈಗ 2 ನೇ ಪ್ರತಿವಾದಿ ದಾವಾಸ್ವತ್ತಿಗೆ ಕಂದಾಯ ಕಟ್ಟುತ್ತಿದ್ದಾರೆ ಎಂದರೆ ಸರಿಯಲ್ಲ. ದಾವಾಸ್ವತ್ತಿನಲ್ಲಿ 2 ನೇ ಪ್ರತಿವಾದಿ ಹಾಕಿಕೊಂಡಿರುವ ಗುಡಿಸಲು ಇದೆ ಎಂದರೆ ಸರಿಯಲ್ಲ. ನಾನು ದಾವಾಸ್ವತ್ತಿಗೆ ಕಂದಾಯ ಕಟ್ಟಿದ್ದೇನೆ. ಕಂದಾಯ ರಸೀದಿಗಳನ್ನು ನಾನು ಹಾಜರುಪಡಿಸಿಲ್ಲಎಂದರೆ ಸರಿ. ನಾನು ದಾವಾಸ್ವತ್ತಿಗೆ ಕಂದಾಯ ಕಟ್ಟಿಲ್ಲ ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

10. ದಾವಾಸ್ವತ್ತಿನ ಮೇಲೆ ನನಗೆ ಯಾವುದೇ ರೀತಿಯ ಹಕ್ಕು ಇಲ್ಲ ಎಂದರೆ ಸಾಕ್ಷಿಯು ಅನುಭವದಲ್ಲಿ ನಾನು ಇದ್ದೇನೆ ಎನ್ನುತ್ತಾರೆ. ದಾವಾಸ್ವತ್ತಿನಲ್ಲಿ ನಾನು ಸ್ವಾಧೀನಾನುಭವದಲ್ಲಿ ಇದ್ದೇನೆ ಎಂದು ತೋರಿಸಲು ಯಾವುದೇ ದಾಖಲೆ ಹಾಜರುಪಡಿಸಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರಿದು ಹಾಜರುಪಡಿಸುತ್ತೇನೆ ಎನ್ನುತ್ತಾರೆ.

11. ನನಗೆ ಈಗ ಸುಮಾರು 42 ವರ್ಷ ಆಗಿದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ನನಗೆ 34 ವರ್ಷ ವಯಸ್ಸು ಎನ್ನುತ್ತಾರೆ. ನಾನು 8 ನೇತರಗತಿಯವರೆಗೂ ಓದಿದ್ದೇನೆ. ನಾನು 1990 ರಲ್ಲಿ 8 ನೇ ತರಗತಿ ಓದಿದ್ದೇನೆ. ನಾನು 8 ನೇ ತರಗತಿಯಲ್ಲಿ ಓದುವಾಗ ನನ್ನ 14 ವರ್ಷ ಎಂದರೆ ಸರಿ. ನಾನು ಕಡಬಾದ ಜ್ಞಾನಗಮ್ಯ ಶಾಲೆಯಲ್ಲಿ ಓದಿರುತ್ತೇನೆ. ನನ್ನನ್ನು 1 ನೇ ತರಗತಿಗೆ ಶಾಲೆಗೆ ದಾಖಲು ಮಾಡಿದ್ದು ನನ್ನ ತಂದೆ ಎಂದರೆ ಸರಿ. ಆಗ ನನ್ನ ಶಾಲಾ ದಾಖಲಾತಿಯಲ್ಲಿ ನನ್ನ ತಂದೆಯ ಹೆಸರನ್ನು ವೆಂಕಟಪ್ಪ ಎಂದು ಬರೆಯಲಾಗಿದೆ ಎಂದರೆ ಸರಿ.ಈಗಲೂ ಸಹ ನನ್ನ ಶಾಲಾ ದಾಖಲಾತಿಯಲ್ಲಿ ನನ್ನ ತಂದೆಯ ಹೆಸರು ವೆಂಕಟಪ್ಪ ಎಂದು ಬರುತ್ತಿದೆ ಎಂದರೆ ಸಾಕ್ಷಿಯು ಅದನ್ನು ಬದಲಾವಣೆ ಮಾಡಿಸಿಲ್ಲ ಎನ್ನುತ್ತಾರೆ. ನಾನು ಬಿ.ಪಿ.ಎಲ್ ಕಾರ್ಡ್ ಹೊಂದಿದ್ದೇನೆ ಎಂದರೆ ಸರಿ. ನನ್ನ ತಂದೆ ವೆಂಕಟಪ್ಪ , ತಾಯಿ ಗಂಗಮ್ಮ ಹಾಗೂ ನಾನು ಒಂದೇ ಬಿ.ಪಿ.ಎಲ್ ಕಾರ್ಡ್ ನಲ್ಲಿ ಇದ್ದೇವೆ ಎಂದರೆ ಸರಿಯಲ್ಲ. ನಮ್ಮ ಊರು ಜನರ ಹೆಸರು ಬಿ.ಪಿ.ಎಲ್ ಕಾರ್ಡ್ ನಲ್ಲಿ ಇದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ನನ್ನ ತಂದೆಯ ಹೆಸರಿನಲ್ಲಿ ಬೇರೆ ಬಿ.ಪಿ.ಎಲ್ ಕಾರ್ಡ್ ಇದೆ ಆ ಕಾರ್ಡ್ ನಲ್ಲಿ ನನ್ನ ಹೆಸರು ಇಲ್ಲ ಎನ್ನುತ್ತಾರೆ. ನನ್ನ ತಂದೆ, ತಾಯಿ ಹಾಗೂ ನನ್ನ ಹೆಸರು ಒಟ್ಟು ಕುಟುಂಬದಲ್ಲಿ ಒಂದೇ ಬಿ.ಪಿ.ಎಲ್ ಕಾರ್ಡ್ ನಲ್ಲಿ ಇದೆ ಎಂದರೆ ಸರಿಯಲ್ಲ. ನನ್ನ ಆಧಾರ್ ಕಾರ್ಡ್ ನಲ್ಲೂ ಸಹ ನನ್ನ ತಂದೆಯ ಹೆಸರು ವೆಂಕಟಪ್ಪ ಎಂದು ಇದೆ ಎಂದರೆ ಸರಿ. ಸಾಕ್ಷಿ ಮುಂದುವರಿದು ಅದನ್ನು ಚೇಂಜ್ ಮಾಡಿಸಿಲ್ಲ ಎನ್ನುತ್ತಾರೆ.

12. ಸಣ್ಣಮ್ಮಳ ಗಂಡ ನ ಹೆಸರು ರಾಮಯ್ಯ. ಸಣ್ಣಮ್ಮ ಹಾಗೂ ರಾಮಯ್ಯ ಒಟ್ಟಿಗೆ ಜೀವನ ಮಾಡಿಕೊಂಡಿರಲ್ಲಿಲ ಅವರು ಬೇರೆ ಬೇರೆ ಇದ್ದರು. ಸಣ್ಣಮ್ಮ 2005 ರಲ್ಲಿ ಮೃತಪಟ್ಟಿರುತ್ತಾಳೆ. ಸಣ್ಣಮ್ಮ ಮೃತಪಟ್ಟಾಗ ಆಕೆಗೆ ಸುಮಾರು 85 ವರ್ಷ ವಯಸ್ಸಾಗಿತ್ತು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ಆಕೆಗೆ 50 ವರ್ಷ ಆಗಿತ್ತುಎನ್ನುತ್ತಾರೆ. ಸಣ್ಣಮ್ಮಳಿಗೆ ಓದು ಬರಹ ಬರುತ್ತಾ ಇರಲಿಲ್ಲ ಎಂದರೆ ನನಗೆ ಗೊತ್ತಿಲ್ಲ. ಸಣ್ಣಮ್ಮ ಸಹಿ ಮಾಡುತ್ತಿದ್ದಳು. ಸಣ್ಣಮ್ಮ ಹೆಬ್ಬೆಟ್ಟಿನ ಸಹಿ ಹಾಕ್ಕುತ್ತಿದ್ದಳು ಎಂದರೆ ಸಾಕ್ಷಿ ಇರಬಹುದೇನೋ ನನಗೆ ಗೊತ್ತಿಲ್ಲ ಎನ್ನುತ್ತಾರೆ. ಸದರಿ ಸಣ್ಣಮ್ಮಳಿಗೆ ಮಕ್ಕಳಿರಲಿಲ್ಲ ಎಂದರೆ ಸರಿ. ಸಣ್ಣಮ್ಮಳ ಹೆಸರಿನಲ್ಲಿದ್ದ ದಾವಾಸ್ವತ್ತನ್ನು ಹೇಗಾದರೂ ಮಾಡಿ ನಾವು ಕಬಳಿಸಿಕೊಳ್ಳಬೇಕು ಎಂಬ ದುರದ್ದೇಶದಿಂದ ನನ್ನ ತಂದೆ ಒಂದು ದಾಖಲೆ ಅಂದರೆ ದತ್ತು ಸ್ವೀಕಾರ ಪತ್ರ ವನ್ನು ಸೃಷ್ಟಿ ಮಾಡಿದ್ದಾರೆ ಎಂದರೆ ಸರಿಯಲ್ಲ ನನ್ನ ತಂದೆಗೆ ನಾನು ಒಬ್ಬನೇ ಮಗನಾಗಿರವುದರಿಂದ ಅವರು ನನ್ನನ್ನು ದತ್ತುಕೊಡುವ ಪ್ರಶ್ನೆಯೇ ಇಲ್ಲ ಎಂದರೆ ಸರಿಯಲ್ಲ. ಬೇರೆದಾಖಲಾತಿ ಮಾಡಿದರೆ ಹಣ ಖಶಚಾಗುತ್ತದೆ ಎಂದು ದತ್ತುಪತ್ರ ವನ್ನು ಸೃಷ್ಟಿಮಾಡಿದ್ದಾರೆ ಎಂದರೆ ಸರಿಯಲ್ಲ.

(ಮುಂದುವರಿದ ಪಾಟೀಸವಾಲಿಗೆ ಸಮಯಾವಕಾಶ ಕೋರಿದ್ದು ಸಮಯಾವಕಾಶ ನೀಡಲಾಯಿತು.

ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿ

ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ.,
ಗುಬ್ಬಿ.